ಎಂದೂ ಕಲ್ತಿಸಿಕೊಂಡಿರಲೇ ಇಲ್ಲ. ನಾನು ಓದದೆ, ಬರೆಯದೆ ಇದ್ದರೂ ನನಗೆ ಮಾವನವರ ನಡವಳಿಕೆಯಿಂದ, ಆದರ್ಶದಿಂದ, ಅವರ ಮಾತುಗಾರಿಕೆಯಿಂದ ಒಂದು ಅಪೂರ್ವವಾದ ತಿಳಿವಳಿಕೆ ಬಂದಿತ್ತು. ಹಾಗೂ ಯಾರಾದರೂ ನಾನು ಮಾತನಾಡುವಾಗ ನನ್ನ ತಿಳಿವಳಿಕೆಯ ಮಾತುಗಳನ್ನು ಕೇಳಿದಾಗ 'ನೀನು ಏನು ಓದಿರುವುದು' ಎಂದು ನನ್ನನ್ನು ಕೇಳುತ್ತಿದ್ದರು. ಆಗ ನಾನು ಅವರಿಗೆ 'ಏನೂ ಓದಿಲ್ಲ' ಎಂದು ಹೇಳುತ್ತಿದ್ದೆ. ಆಗ ಅವರು ಆಶ್ಚರ್ಯಪಟ್ಟು, 'ನೀನು ಓದಿದ್ದರೆ ಇನ್ನೂ ಬುದ್ಧಿವಂತೆ ಆಗುತ್ತಿದ್ದೆ' ಎಂದು ಹೇಳುತ್ತಿದ್ದರು. ಸಿದ್ದೇಗೌಡರು ಮತ್ತು ಅವರ ಪತ್ನಿ ನನ್ನ ಅಕ್ಕನ ಸ್ನೇಹಿತೆ ಚೆನ್ನಮ್ಮ ಅವರು ನನ್ನ ಮದುವೆ ವಿಷಯ ಪ್ರಸ್ತಾಪ ಮಾಡಿ, ಅವರ ಮಗನಿಗೆ ನನ್ನನ್ನು ತಂದುಕೊಳ್ಳಲು ನಿರ್ಧಾರ ಮಾಡಿ ಬಂದಿರುವ ಉದ್ದೇಶವನ್ನೆಲ್ಲಾ ಕೇಳಿದಾಗ ನನಗೂ ಕ್ಷಣ ಏನೂ ಯೋಚನೆ ಹೊಳೆಯದಂತಾಗಿತ್ತು.

ಮಾವ ತಮ್ಮ ಮೌನ ಮುರಿದು, 'ಯಾರ್‍ಯಾರ ಹಣೆಯಲ್ಲಿ ಆ ವಿಧಿ ಏನೇನು ಅಂಥ ಬರೆದದ್ದೋ ಯಾರಿಗೆ ಗೊತ್ತು. ಅದು ಹಾಗೇ ಆಗಬೇಕು ಅಂಥ ಇದ್ದರೆ ಅದನ್ನು ಯಾರೂ ತಪ್ಪಿಸಲು ಆಗುವುದಿಲ್ಲ. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಇದಕ್ಕೆ ನನ್ನ ನಾದಿನಿಯ ಒಪ್ಪಿಗೆ ಬಹುಮುಖ್ಯ. ನಾನು ಅವಳನ್ನು ನನ್ನ ಮನೆ ಮಗಳೇ ಅಂಥ ಇವತ್ತಿಗೂ ತಿಳಿದುಕೊಂಡಿದ್ದೇನೆ. ಆಕೆಯನ್ನು ನೀವೇ ಕೇಳಿ' ಎಂದುಬಿಟ್ಟರು.

ಸಿದ್ದೇಗೌಡರು ನನ್ನನ್ನು ಕೇಳಿದರು. ನಾನೂ ಎಲ್ಲಾ ಭಾರವನ್ನೂ ನನ್ನ ಮಾವನವರ ಮೇಲೇ ಹಾಕಲು ನಿರ್ಧರಿಸಿ, ಅವರಿಗೆಲ್ಲಾ ಮಾಡಿದ್ದ ಕಾಫಿಯನ್ನು ತಂದುಕೊಟ್ಟು, 'ಇದಕ್ಕೆ ನಮ್ಮ ಮಾವನವರ ತೀರ್ಮಾನವೇ ಮುಖ್ಯ' ಎಂದೆ. ನನ್ನ ಮಾತಿನಿಂದ ಆಗ ಮಾವನವರ ಮುಖದಲ್ಲಿ ಗೆಲವು ಮೂಡಿದ್ದನ್ನು ಗಮನಿಸಿದೆ. ಎಲ್ಲರೂ ಕಾಫಿ ಕುಡಿದ ಮೇಲೆ ಮಾವನವರು, 'ನಿಮ್ಮ ಮನೆಯವರಿಗೆಲ್ಲಾ ಒಪ್ಪಿಗೆಯಾಗಿದ್ದರೆ, ನಿಮ್ಮ ಮಗನಿಗೆ ಇವಳನ್ನು ಮದುವೆ ಮಾಡಿಕೊಳ್ಳಲು ಇಷ್ಟವಿದ್ದರೆ, ಆಗಲಿ' ಎಂದವರೇ ನಾಳೆ ಸಿದ್ದೇಗೌಡರು ಮತ್ತು ಅವರ ಮಗ ನಮ್ಮ ಮನೆಗೆ ಬರುವಂತೆ ಹೇಳಿ ಅವರನ್ನು ಕಳಿಸಿದರು. ಆಗ ಮಾವನವರು ಯಾಕೆ ಅಪ್ಪ ಮತ್ತು ಮಗ ಇಬ್ಬರನ್ನೇ ಕರೆಯುತ್ತಿದ್ದಾರೆ ಎಂದು ನನಗೆ ಏನೂ ಹೊಳೆಯಲಿಲ್ಲ. ನಾನೂ ಅವರನ್ನು ಕೇಳಲು ಹೋಗಲಿಲ್ಲ.

ಮಾರನೆಯ ದಿನ ಸಂಜೆಗೆ ಸಿದ್ದೇಗೌಡರು ಮತ್ತು ಅವರ ಮಗ ನಮ್ಮ ಮನೆಗೆ ಬಂದರು. ಆಗ ಮಾವ ಅವರ ಜೊತೆಯಲ್ಲಿ ನನ್ನನ್ನು ಕೂರಿಸಿಕೊಂಡು ತಮ್ಮ ನಿರ್ಧಾರವನ್ನು ತಿಳಿಸಿದರು. ಅವರ ನಿರ್ಧಾರ ಏನೆಂದರೆ, ತಮ್ಮ ಮನೆ, ಗದ್ದೆ, ಹೊಲವನ್ನೆಲ್ಲಾ ನನ್ನ ಹೆಸರಿಗೆ ಬರೆಯುವುದಾಗಿಯೂ, ನಾನು ಮತ್ತೆ ಮದುವೆಯಾಗಿ ಸಿದ್ದೇಗೌಡರ ಮನೆಗೆ ಹೋಗಿಬಿಟ್ಟರೆ ತಾವು ಒಂಟಿಯಾಗುತ್ತೇನೆಂದು, ಅದಕ್ಕೆ ಮದುವೆ ಆದ ಮೇಲೆ ಅವರ ಮಗನನ್ನು ತಮ್ಮ ಮನೆವಾಳ್ತನಕ್ಕೇ ಒಪ್ಪಿಸಿಬಿಡುವಂತೆ ಮನವಿ ಮಾಡಿದರು. ಸಿದ್ದೇಗೌಡರಿಗೆ ಅವರ ಮಾತಿನಿಂದ ಕ್ಷಣ ಯೋಚಿಸುವಂತಾಯ್ತು. ಆಗ ಅವರು ಹಾಗಾದರೆ ಈ ವಿಷಯವನ್ನು ತಮ್ಮ ಮನೆಯಲ್ಲಿ ಕೂತು, ಎಲ್ಲರೊಡನೆ ಚರ್ಚೆ ಮಾಡಿ ಬಂದು ಹೇಳುವುದಾಗಿ ಮಾವನಿಗೆ ತಿಳಿಸಿದರು. ಮಾವನವರು ಅವರ ಮಗನನ್ನು 'ನನ್ನ ನಾದಿನಿಯನ್ನು ಮದುವೆ ಆಗಲು ನಿನಗೆ ಇಷ್ಟವಿದೆಯೇ' ಎಂದು ಕೇಳಿದರು. ಅವನೂ ತಮ್ಮ ತಂದೆ ತಾಯಿ ಒಪ್ಪಿದ ಮೇಲೆ ತನ್ನ ತಕರಾರು ಏನೂ ಇಲ್ಲ ಎಂದವನೇ, 'ನಾನೂ ಚಿಕ್ಕಂದಿನಿಂದ ಇವಳನ್ನು ನೋಡಿದ್ದೇನೆ' ಎಂದು ಅವನು ನನ್ನ ಬಗ್ಗೆ ಒಳ್ಳೆ ಮಾತನ್ನೇ ಹೇಳಿದ. ಆಮೇಲೆ ಅಪ್ಪ-ಮಗ ಇಬ್ಬರೂ ಹೊರಟುಹೋದರು.

ಮಾರನೆಗೆ ಮತ್ತೆ ಸಿದ್ದೇಗೌಡರು ಮನೆಗೆ ಬಂದು ಮಾವನಿಗೆ ತಮ್ಮ ಮನೆಯವರೆಲ್ಲಾ ತಮ್ಮ ಮಗನನ್ನು ಮಾವನ ಮನೆಗೆ ಮನೆವಾಳ್ತನಕ್ಕೆ ಕಳಿಸಲು ಒಪ್ಪಿರುವುದನ್ನು ತಿಳಿಸಿದರು. ಇನ್ನು ನನ್ನ ಮದುವೆ ಮಾತ್ರ ಉಳಿದದ್ದು. ನನಗೆ ಮದುವೆ ಅಂಥ ಮಾಡಲು ಬರಲ್ಲ 'ಕೂಡಿಕೆ' ಅಥವಾ 'ಮರುಮದುವೆ' ಅಂಥ ಮಾಡಬೇಕು ಎಂದು ಕೆಲವು ಹಿರಿಯರು ಸೂಚಿಸಿದರಂತೆ. ಆದರೆ, ಮಾವನವರು 'ಅದ್ದೂರಿಯಾಗಿ ಮದುವೆ ಮಾಡುವುದೇನೂ ಬೇಡ. ಸರಳವಾಗಿ ಊರಿನವರಿಗೆ ತಿಂಡಿ ಕಾಫಿ ಟೀ ಮಾಡಿಸುವ. ಊರು ಮುಂದಿನ ಆಂಜನೇಯನ ಗುಡಿಯ ಮುಂದೆ ಒಂದು ಸಣ್ಣ ಚಪ್ಪರ ಹಾಕಿಸಿ ಕುವೆಂಪು ಅವರ 'ಮಂತ್ರಮಾಂಗಲ್ಯ'